## ಕರ್ನಾಟಕ ಸರ್ಕಾರ

**ಸಂಖ್ಯೆ:** ಗ್ರಾಅಪ 57 ಜಿಪಅ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 26.07.2021

## ಅಧಿಸೂಚನೆ

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ), 2013ರ ಆದೇಶದ ಕಂಡಿಕೆ-3ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿನ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಸ್ಥಳೀಯ ವೃಂದಗಳನ್ನು ರಚಿಸಿ, ಸದರಿ ವೃಂದಗಳಲ್ಲಿ ಹುದ್ದೆಗಳ ಸಂಖ್ಯೆಯನ್ನು ಗುರುತಿಸಿ ಈ ಮೂಲಕ ಅಧಿಸೂಚಿಸಲಾಗಿದೆ :-

**ಸ್ಥಳೀಯ ವೃಂದಗಳು :**

**ಗ್ರೂಪ್-ಎ ವೃಂದಗಳು**

**1. ಸಹಾಯಕ ಕಾರ್ಯಪಾಲಕ ಅಭಿಯಂತರರು-I (ವೇತನ ಶ್ರೇಣಿ: 52650-97100):** ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಸಹಾಯಕ ಕಾರ್ಯಪಾಲಕ ಅಭಿಯಂತರರು - 1 ವೃಂದದಲ್ಲಿ 147 ಹುದ್ದೆಗಳು ಹಾಗೂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ - 2 ವೃಂದದಲ್ಲಿ 37 ಹುದ್ದೆಗಳು ಮಂಜೂರಾಗಿವೆ. ಈ ಎರಡು ವೃಂದಗಳಲ್ಲಿ ಒಟ್ಟಾರೆ 184 ಹುದ್ದೆಗಳು ಮಂಜೂರಾಗಿರುತ್ತವೆ. ಈ ರೀತಿ ಮಂಜೂರಾಗಿರುವ ಗ್ರೂಪ್ ಎ ಶ್ರೇಣಿಯ ಹುದ್ದೆಗಳಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಒಟ್ಟು 33 ಹುದ್ದೆಗಳು ಮಂಜೂರಾಗಿವೆ. ಸ್ಥಳೀಯ ಪ್ರದೇಶಕ್ಕೆ ಮಂಜೂರಾಗಿರುವ ಹುದ್ದೆಗಳ ಪೈಕಿ ಶೇಕಡ 75ರಷ್ಟು ಹುದ್ದೆಗಳು ಸ್ಥಳೀಯರಿಗೆ ಹಾಗೂ ಶೇಕಡ 25ರಷ್ಟು ಹುದ್ದೆಗಳು ಸ್ಥಳೀಯೇತರರಿಗೆ

ಅಂದರೆ 25 ಹುದ್ದೆಗಳು ಸ್ಥಳೀಯರಿಗೆ ಹಾಗೂ 08 ಹುದ್ದೆಗಳು ಸ್ಥಳೀಯೇತರರಿಗೆ ಲಭ್ಯವಾಗುತ್ತವೆ. ಇದರಲ್ಲಿ ಕೇಂದ್ರ ಕಛೇರಿಯಲ್ಲಿ ಸ್ಥಳೀಯ ವೃಂದಕ್ಕೆ ಮೀಸಲಾಗಿರುವ ಒಂದು ಹುದ್ದೆಯು ಸಹ ಸೇರ್ಪಡೆಯಾಗಿರುತ್ತದೆ.

**ಸಹಾಯಕ ಕಾರ್ಯಪಾಲಕ ಅಭಿಯಂತರರು-II (ವೇತನ ಶ್ರೇಣಿ: 52650-97100):** ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಸಹಾಯಕ ಕಾರ್ಯಪಾಲಕ ಇಂಜಿನಿಯರ್ -2 ವೃಂದದಲ್ಲಿ 37 ಹುದ್ದೆಗಳು ಮಂಜೂರಾಗಿವೆ. ಈ ರೀತಿ ಮಂಜೂರಾಗಿರುವ ಗ್ರೂಪ್ ಎ ಶ್ರೇಣಿಯ ಹುದ್ದೆಗಳಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಒಟ್ಟು 08 ಹುದ್ದೆಗಳು ಮಂಜೂರಾಗಿವೆ. ಸ್ಥಳೀಯ ಪ್ರದೇಶಕ್ಕೆ ಮಂಜೂರಾಗಿರುವ ಹುದ್ದೆಗಳ ಪೈಕಿ ಶೇಕಡ 75ರಷ್ಟು ಹುದ್ದೆಗಳು ಸ್ಥಳೀಯರಿಗೆ ಹಾಗೂ ಶೇಕಡ 25ರಷ್ಟು ಹುದ್ದೆಗಳು ಸ್ಥಳೀಯೇತರರಿಗೆ ಅಂದರೆ 06 ಹುದ್ದೆಗಳು ಸ್ಥಳೀಯರಿಗೆ ಹಾಗೂ 02 ಹುದ್ದೆಗಳು ಸ್ಥಳೀಯೇತರರಿಗೆ ಲಭ್ಯವಾಗುತ್ತವೆ.

ಅದರನ್ವಯ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ ಈ ಕೆಳಕಂಡಂತೆ ಹುದ್ದೆಗಳು ಲಭ್ಯವಾಗುತ್ತವೆ :-

1. ಸಹಾಯಕ ಕಾರ್ಯಪಾಲಕ ಅಭಿಯಂತರರು - 1 - ನೇರನೇಮಕಾತಿಗೆ 05 ಹುದ್ದೆಗಳು (ಸ್ಥಳೀಯರಿಗೆ)
2. ಸಹಾಯಕ ಇಂಜಿನಿಯರ್ ಗ್ರೇಡ್-1 ರಿಂದ ಮುಂಬಡ್ತಿಗೆ - 15 ಹುದ್ದೆಗಳು
3. ಸಹಾಯಕ ಇಂಜಿನಿಯರ್ ಗ್ರೇಡ್-2 ರಿಂದ ಮುಂಬಡ್ತಿಗೆ - 06 ಹುದ್ದೆಗಳು

**ಗ್ರೂಪ್-ಬಿ ವೃಂದಗಳು**

1. **ಸಹಾಯಕ ಇಂಜಿನಿಯರ್-1 (ವೇತನ ಶ್ರೇಣಿ: 43100-83900):** ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಸಹಾಯಕ ಇಂಜಿನಿಯರ್ -1 ವೃಂದದಲ್ಲಿ 205 ಹುದ್ದೆಗಳು ಮಂಜೂರಾಗಿರುತ್ತವೆ. ಸಹಾಯಕ ಇಂಜಿನಿಯರ್-1 ವೃಂದದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ 38 ಹುದ್ದೆಗಳು ಮಂಜೂರಾಗಿರುತ್ತವೆ.

ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಮಂಜೂರಾಗಿರುವ ಹುದ್ದೆಗಳ ಪೈಕಿ ಶೇ. 75 ರಷ್ಟು ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ಮೀಸಲಿರಿಸಬೇಕಾಗುತ್ತದೆ. ಅದರನ್ವಯ ಸಹಾಯಕ ಇಂಜಿನಿಯರ್ -1 ವೃಂದದಲ್ಲಿ ಮಂಜೂರಾಗಿರುವ 38 ಹುದ್ದೆಗಳ ಪೈಕಿ 29 ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ಮೀಸಲಿರಿಸಲಾಗಿದೆ. ಈ ಪೈಕಿ ಶೇ. 75 ರಷ್ಟು ನೇರ ನೇಮಕಾತಿಗೆ ಅಂದರೆ 21 ಹುದ್ದೆಗಳು ಹಾಗೂ ಶೇ. 25 ರಷ್ಟು ಹುದ್ದೆಗಳು

ಅಂದರೆ 08 ಹುದ್ದೆಗಳು ಕಿರಿಯ ಇಂಜಿನಿಯರ್ ವೃಂದದಲ್ಲಿ ಬಿ.ಇ. ಸಿವಿಲ್ ಇಂಜಿನಿಯರಿಂಗ್ ಪದವಿ ಹೊಂದಿದ ಅಭ್ಯರ್ಥಿಗಳ ಮುಂಬಡ್ತಿಗೆ ಲಭ್ಯವಾಗುತ್ತವೆ. ಇದರಲ್ಲಿ ಕೇಂದ್ರ ಕಛೇರಿಯಲ್ಲಿ ಸ್ಥಳೀಯ ವೃಂದಕ್ಕೆ ಮೀಸಲಾಗಿರುವ ಒಂದು ಹುದ್ದೆಯು ಸಹ ಸೇರ್ಪಡೆಯಾಗಿರುತ್ತದೆ.

**ಸಹಾಯಕ ಇಂಜಿನಿಯರ್-2 (ವೇತನ ಶ್ರೇಣಿ: 43100-83900):** ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಸಹಾಯಕ ಇಂಜಿನಿಯರ್-2 ವೃಂದದಲ್ಲಿ 51 ಹುದ್ದೆಗಳು ಮಂಜೂರಾಗಿರುತ್ತವೆ. ಸಹಾಯಕ ಇಂಜಿನಿಯರ್-2 ವೃಂದದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ 10 ಹುದ್ದೆಗಳು ಮಂಜೂರಾಗಿರುತ್ತವೆ. ಸಹಾಯಕ ಇಂಜಿನಿಯರ್ - 2 ವೃಂದದಲ್ಲಿ ಸ್ಥಳೀಯ ವೃಂದಕ್ಕೆ ಮೀಸಲಾಗಿರುವ 10 ಹುದ್ದೆಗಳ ಪೈಕಿ ಶೇ. 75 ರಷ್ಟು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಅಂದರೆ 08 ಹುದ್ದೆಗಳು ಲಭ್ಯವಾಗಲಿದ್ದು, ಈ ಎಲ್ಲಾ ಹುದ್ದೆಗಳನ್ನು ಮುಂಬಡ್ತಿಯಿಂದ ತುಂಬಬೇಕಾಗುತ್ತದೆ.

**2. ಪತ್ರಾಂಕಿತ ವ್ಯವಸ್ಥಾಪಕರು (ವೇತನ ಶ್ರೇಣಿ: 40900-78200):** ಈ ವೃಂದದಲ್ಲಿ ಒಟ್ಟು 05 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 1 ಹುದ್ದೆ ಕಲ್ಯಾಣ - ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತದೆ. ಸ್ಥಳೀಯ ವೃಂದಕ್ಕೆ ಒಟ್ಟು ಹುದ್ದೆಗಳ ಶೇಕಡ 75 ರಷ್ಟನ್ನು ಮಿಕ್ಕುಳಿಕೆ ವೃಂದಕ್ಕೆ ಶೇಕಡ 25ರಷ್ಟು ಹುದ್ದೆಗಳನ್ನು ಮೀಸಲಿರಿಸಬೇಕಾಗಿದೆ. ಕಲ್ಯಾಣ - ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಒಂದು ಹುದ್ದೆ ಮಾತ್ರ ಇರುವ ಕಾರಣ ಅದನ್ನು ಸ್ಥಳೀಯ ವೃಂದಕ್ಕೆ ಮೀಸಲಿರಿಸಿದೆ. ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಶೇ.100ರಷ್ಟು ಮುಂಬಡ್ತಿ ಮೂಲಕ ತುಂಬಬೇಕಾಗಿದ್ದು, ಅದರನ್ವಯ ಸ್ಥಳೀಯ ವೃಂದಕ್ಕೆ ಒಂದು ಹುದ್ದೆ ಮುಂಬಡ್ತಿಯಡಿ ಮೀಸಲಿರಿಸಿದೆ.

**ಗ್ರೂಪ್-ಸಿ ವೃಂದಗಳು**

**1. ಅಧೀಕ್ಷಕರು (ವೇತನ ಶ್ರೇಣಿ:37900-70850):** ಈ ವೃಂದದಲ್ಲಿ ಒಟ್ಟು 40 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 7 ಹುದ್ದೆಗಳು ಕಲ್ಯಾಣ-ಕರ್ನಾಟಕ ಪ್ರದೇಶದಲ್ಲಿ ಮಂಜೂರಾಗಿವೆ. ಕಲ್ಯಾಣ - ಕರ್ನಾಟಕ ಪ್ರದೇಶಕ್ಕೆ ಒಟ್ಟು ಹುದ್ದೆಗಳ ಶೇಕಡ 80 ರಷ್ಟು ಹುದ್ದೆಗಳು ಹಾಗೂ ಮಿಕ್ಕುಳಿಕೆ ವೃಂದಕ್ಕೆ ಶೇಕಡ 20 ರಷ್ಟು ಹುದ್ದೆಗಳನ್ನು ಮೀಸಲಿರಿಸಬೇಕಾಗಿದೆ. ಕಲ್ಯಾಣ - ಕರ್ನಾಟಕ ಪ್ರದೇಶದ ಒಟ್ಟು 07 ಹುದ್ದೆಗಳ ಪೈಕಿ ಶೇಕಡ 80 ರಷ್ಟನ್ನು ಅಂದರೆ 06 ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ಹಾಗೂ 01 ಹುದ್ದೆಯನ್ನು ಮಿಕ್ಕುಳಿಕೆ ವೃಂದಕ್ಕೆ ಮೀಸಲಿರಿಸಿದೆ. ವೃಂದ

ಮತ್ತು ನೇಮಕಾತಿ ನಿಯಮಗಳಲ್ಲಿ ಶೇ.100ರಷ್ಟು ಮುಂಬಡ್ತಿ ಮೂಲಕ ತುಂಬಲು ಅವಕಾಶ ಕಲ್ಪಿಸಲಾಗಿದೆ. ಇದರಲ್ಲಿ ಕೇಂದ್ರ ಕಛೇರಿಯಲ್ಲಿ ಸ್ಥಳೀಯ ವೃಂದಕ್ಕೆ ಮೀಸಲಾಗಿರುವ ಒಂದು ಹುದ್ದೆಯು ಸಹ ಸೇರ್ಪಡೆಯಾಗಿರುತ್ತದೆ.

**2. ಲೆಕ್ಕಾಧೀಕ್ಷಕರು (ವೇತನ ಶ್ರೇಣಿ:37900-70850):** ಈ ವೃಂದದಲ್ಲಿ ಒಟ್ಟು 34 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 07 ಹುದ್ದೆಗಳು ಕಲ್ಯಾಣ - ಕರ್ನಾಟಕ ಪ್ರದೇಶಕ್ಕೆ ಮೀಸಲಾಗಿವೆ. ಕಲ್ಯಾಣ - ಕರ್ನಾಟಕ ಪ್ರದೇಶಕ್ಕೆ ಒಟ್ಟು ಹುದ್ದೆಗಳ ಶೇಕಡ 80 ರಷ್ಟು ಹುದ್ದೆಗಳು ಹಾಗೂ ಮಿಕ್ಕುಳಿಕೆ ವೃಂದಕ್ಕೆ ಶೇಕಡ 20 ರಷ್ಟು ಹುದ್ದೆಗಳನ್ನು ಮೀಸಲಿರಿಸಬೇಕಾಗಿದೆ. ಕಲ್ಯಾಣ - ಕರ್ನಾಟಕ ಪ್ರದೇಶದ ಒಟ್ಟು 07 ಹುದ್ದೆಗಳ ಪೈಕಿ ಶೇಕಡ 80 ರಷ್ಟನ್ನು ಅಂದರೆ 06 ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ಹಾಗೂ ಒಂದು ಹುದ್ದೆಯನ್ನು ಮಿಕ್ಕುಳಿಕೆ ವೃಂದಕ್ಕೆ ಮೀಸಲಿರಿಸಿದೆ. ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಒಟ್ಟು ಹುದ್ದೆಗಳ ಪೈಕಿ ಶೇ.50ರಷ್ಟು ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಲು ಹಾಗೂ ಶೇ. 50ರಷ್ಟು ಹುದ್ದೆಗಳನ್ನು ರಾಜ್ಯ ಆಡಿಟ್ ಮತ್ತು ಲೆಕ್ಕ ಪತ್ರ ಇಲಾಖೆಯ ಸಿಬ್ಬಂದಿಯ ನಿಯೋಜನೆ ಮೂಲಕ ತುಂಬಬೇಕಾಗಿದೆ. ಅದರನ್ವಯ ಸ್ಥಳೀಯ ವೃಂದಕ್ಕೆ 06 ಹುದ್ದೆಗಳು ಲಭ್ಯವಿದ್ದು 03 ಹುದ್ದೆಗಳನ್ನು ಮುಂಬಡ್ತಿ ಮೂಲಕ ಮತ್ತು 03 ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ಸೇರಿದ ರಾಜ್ಯ ಆಡಿಟ್ ಮತ್ತು ಲೆಕ್ಕ ಪತ್ರ ಇಲಾಖೆಯ ಸಿಬ್ಬಂದಿಯ ನಿಯೋಜನೆ ಮೂಲಕ ತುಂಬಲು ಹಾಗೂ ಒಂದು ಹುದ್ದೆಯನ್ನು ಮಿಕ್ಕುಳಿಕೆ ವೃಂದಕ್ಕೆ ಮುಂಬಡ್ತಿಯಡಿ ಮೀಸಲಿರಿಸಿದೆ.

**3. ಸಹಾಯಕ ಸಾಂಖ್ಯಿಕ ಅಧಿಕಾರಿ (ವೇತನ ಶ್ರೇಣಿ:33450-62600):** ಈ ವೃಂದದಲ್ಲಿ ಒಟ್ಟು 05 ಮಂಜೂರಾದ ಹುದ್ದೆಗಳಿರುತ್ತವೆ. ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ 01 ಹುದ್ದೆ ಮಂಜೂರಾಗಿದ್ದು, ಸದರಿ ಹುದ್ದೆಯನ್ನು ಸಾಂಖ್ಯಿಕ ಇಲಾಖೆಯ ಅಧಿಕಾರಿಯಿಂದ ನಿಯೋಜನೆ ಮೂಲಕ ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಸದರಿ ಹುದ್ದೆಯು ಗ್ರೂಪ್ -ಸಿ ವೃಂದದ ಹುದ್ದೆಯಾಗಿರುವುದರಿಂದ ಈ ಹುದ್ದೆಯನ್ನು ಸ್ಥಳೀಯ ಪ್ರದೇಶಕ್ಕೆ ಸೇರಿದ ಸಾಂಖ್ಯಿಕ ಇಲಾಖೆಯ ಸಿಬ್ಬಂದಿಯ ನಿಯೋಜನೆಯಿಂದ ಭರ್ತಿ ಮಾಡಲು ಕಾಯ್ದಿರಿಸಲಾಗಿದೆ.

**4. ಕಿರಿಯ ಇಂಜಿನಿಯರ್ (ವೇತನ ಶ್ರೇಣಿ:33450-62600):** ಈ ವೃಂದದಲ್ಲಿ ಒಟ್ಟು 568 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 105 ಹುದ್ದೆಗಳು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಮಂಜೂರಾಗಿವೆ. ಕಲ್ಯಾಣ - ಕರ್ನಾಟಕ ಪ್ರದೇಶಕ್ಕೆ ಒಟ್ಟು ಹುದ್ದೆಗಳ ಶೇಕಡ 80 ರಷ್ಟು ಹುದ್ದೆಗಳು

ಹಾಗೂ ಮಿಕ್ಕುಳಿಕೆ ವೃಂದಕ್ಕೆ ಶೇಕಡ 20 ರಷ್ಟು ಹುದ್ದೆಗಳನ್ನು ಮೀಸಲಿರಿಸಬೇಕಾಗಿದೆ. ಕಲ್ಯಾಣ - ಕರ್ನಾಟಕ ಪ್ರದೇಶಕ್ಕೆ ಮಂಜೂರಾಗಿರುವ ಒಟ್ಟು 105 ಹುದ್ದೆಗಳ ಪೈಕಿ ಶೇಕಡ 80 ರಷ್ಟನ್ನು ಅಂದರೆ 84 ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ಹಾಗೂ 21 ಹುದ್ದೆಗಳನ್ನು ಮಿಕ್ಕುಳಿಕೆ ವೃಂದಕ್ಕೆ ಮೀಸಲಿರಿಸಿದೆ. ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಶೇ.100ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಅವಕಾಶ ಕಲ್ಪಿಸಲಾಗಿದೆ. ಅದರನ್ವಯ ಸ್ಥಳೀಯ ವೃಂದಕ್ಕೆ ಲಭ್ಯವಾಗಿರುವ 84 ಹುದ್ದೆಗಳನ್ನು ನೇರ ನೇಮಕಾತಿಯಡಿ ಕಾಯ್ದಿರಿಸಲಾಗಿದೆ.

**5. ಸಾಂಖ್ಯಿಕ ನಿರೀಕ್ಷಕರು (ವೇತನ ಶ್ರೇಣಿ:27650-52650):** ಈ ವೃಂದದಲ್ಲಿ ಒಟ್ಟು 05 ಮಂಜೂರಾದ ಹುದ್ದೆಗಳಿರುತ್ತವೆ. ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ 01 ಹುದ್ದೆ ಮಂಜೂರಾಗಿದ್ದು, ಸದರಿ ಹುದ್ದೆಯನ್ನು ಸಾಂಖ್ಯಿಕ ಇಲಾಖೆಯ ಅಧಿಕಾರಿಯಿಂದ ನಿಯೋಜನೆ ಮೂಲಕ ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಸದರಿ ಹುದ್ದೆಯು ಗ್ರೂಪ್ -ಸಿ ವೃಂದದ ಹುದ್ದೆಯಾಗಿರುವುದರಿಂದ ಈ ಹುದ್ದೆಯನ್ನು ಸ್ಥಳೀಯ ಪ್ರದೇಶಕ್ಕೆ ಸೇರಿದ ಸಾಂಖ್ಯಿಕ ಇಲಾಖೆಯ ಸಿಬ್ಬಂದಿಯ ನಿಯೋಜನೆಯ ಮೂಲಕ ಭರ್ತಿ ಮಾಡಲು ಕಾಯ್ದಿರಿಸಲಾಗಿದೆ.

**6. ಪ್ರಥಮ ದರ್ಜೆ ಸಹಾಯಕರು (ವೇತನ ಶ್ರೇಣಿ:27650-52650):** ಈ ವೃಂದದಲ್ಲಿ ಒಟ್ಟು 222 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 41 ಹುದ್ದೆಗಳು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಮಂಜೂರಾಗಿವೆ. ಸದರಿ ಹುದ್ದೆಯು ಗ್ರೂಪ್ - ಸಿ ವೃಂದದ ಹುದ್ದೆಯಾಗಿದ್ದು ಸ್ಥಳೀಯ ಪ್ರದೇಶಕ್ಕೆ ಮಂಜೂರಾಗಿರುವ ಒಟ್ಟು ಹುದ್ದೆಗಳ ಶೇ. 80 ರಷ್ಟನ್ನು ಸ್ಥಳೀಯ ವೃಂದಕ್ಕೆ ಮೀಸಲಿರಿಸಬೇಕಾಗುತ್ತದೆ. ಅದರಂತೆ 33 ಹುದ್ದೆಗಳು ಸ್ಥಳೀಯ ವೃಂದಕ್ಕೆ ಲಭ್ಯವಾಗುತ್ತವೆ. ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಶೇ.50ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಹಾಗೂ ಶೇ.50ರಷ್ಟು ಹುದ್ದೆಗಳನ್ನು ದ್ವಿತೀಯ ದರ್ಜೆ ಸಹಾಯಕರ ಮುಂಬಡ್ತಿ ಮೂಲಕ ತುಂಬಲು ಅವಕಾಶವಿರುತ್ತದೆ. ಅದರನ್ವಯ ಸ್ಥಳೀಯ ವೃಂದದಲ್ಲಿ ನೇರ ನೇಮಕಾತಿಗೆ 17 ಹುದ್ದೆಗಳು ಹಾಗೂ ದ್ವಿತೀಯ ದರ್ಜೆ ಸಹಾಯಕರಿಂದ ಮುಂಬಡ್ತಿಗೆ 17 ಹುದ್ದೆಗಳನ್ನು ಮೀಸಲಿರಿಸಲಾಗಿದೆ. ಇದರಲ್ಲಿ ಕೇಂದ್ರ ಕಛೇರಿಯಲ್ಲಿ ಸ್ಥಳೀಯ ವೃಂದಕ್ಕೆ ಮೀಸಲಾಗಿರುವ ಒಂದು ಹುದ್ದೆಯು ಸಹ ಸೇರ್ಪಡೆಯಾಗಿರುತ್ತದೆ.

**7. ಪ್ರಥಮ ದರ್ಜೆ ಲೆಕ್ಕ ಸಹಾಯಕರು (ವೇತನ ಶ್ರೇಣಿ:27650-52650):** ಈ ವೃಂದದಲ್ಲಿ ಒಟ್ಟು 32 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 06 ಹುದ್ದೆಗಳು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಮಂಜೂರಾಗಿವೆ. ಸದರಿ ಹುದ್ದೆಯು ಗ್ರೂಪ್ - ಸಿ ವೃಂದದ ಹುದ್ದೆಯಾಗಿದ್ದು ಸ್ಥಳೀಯ ಪ್ರದೇಶಕ್ಕೆ ಮಂಜೂರಾಗಿರುವ ಒಟ್ಟು ಹುದ್ದೆಗಳ ಶೇ. 80 ರಷ್ಟನ್ನು ಸ್ಥಳೀಯ ವೃಂದಕ್ಕೆ ಮೀಸಲಿರಿಸಬೇಕಾಗುತ್ತದೆ. ಅದರಂತೆ ಒಟ್ಟು 06 ಹುದ್ದೆಗಳ ಪೈಕಿ 05 ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ಮೀಸಲಿರಿಸಲಾಗಿದೆ. ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಶೇ.30ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಹಾಗೂ ಶೇ. 20 ರಷ್ಟನ್ನು ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ಹಾಗೂ ಉಳಿದ ಶೇ.50ರಷ್ಟು ಹುದ್ದೆಗಳನ್ನು ರಾಜ್ಯ ಆಡಿಟ್ ಮತ್ತು ಲೆಕ್ಕಪತ್ರ ಇಲಾಖೆಯ ಸಿಬ್ಬಂದಿಗಳ ನಿಯೋಜನೆ ಮೂಲಕ ತುಂಬಲು ಅವಕಾಶವಿರುತ್ತದೆ. ಅದರನ್ವಯ ಎರಡು ಹುದ್ದೆಗಳನ್ನು ನೇರ ನೇಮಕಾತಿಗೆ, ಎರಡು ಹುದ್ದೆಗಳನ್ನು ಮುಂಬಡ್ತಿಗೆ ಮತ್ತು ಎರಡು ಹುದ್ದೆಗಳನ್ನು ನಿಯೋಜನೆ ಮೂಲಕ ಭರ್ತಿ ಮಾಡಲು ನಿಗಧಿಪಡಿಸಲಾಗಿದೆ. ಇದರಲ್ಲಿ ಕೇಂದ್ರ ಕಛೇರಿಯಲ್ಲಿ ಸ್ಥಳೀಯ ವೃಂದಕ್ಕೆ ಮೀಸಲಾಗಿರುವ ಒಂದು ಹುದ್ದೆಯು ಸಹ ಸೇರ್ಪಡೆಯಾಗಿರುತ್ತದೆ.

**8. ಶೀಘ್ರಲಿಪಿಗಾರರು (ವೇತನ ಶ್ರೇಣಿ:27650-52650):** ಈ ವೃಂದದಲ್ಲಿ ಒಟ್ಟು 38 ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 07 ಹುದ್ದೆಗಳು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಮಂಜೂರಾಗಿವೆ. ಸದರಿ ಹುದ್ದೆಯು ಗ್ರೂಪ್ - ಸಿ ವೃಂದದ ಹುದ್ದೆಯಾಗಿದ್ದು ಸ್ಥಳೀಯ ಪ್ರದೇಶಕ್ಕೆ ಮಂಜೂರಾಗಿರುವ ಒಟ್ಟು ಹುದ್ದೆಗಳ ಶೇ. 80 ರಷ್ಟನ್ನು ಸ್ಥಳೀಯ ವೃಂದಕ್ಕೆ ಮೀಸಲಿರಿಸಬೇಕಾಗುತ್ತದೆ. ಅದರಂತೆ 06 ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ನಿಗಧಿಪಡಿಸಲಾಗಿದೆ. ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಶೇ.100ರಷ್ಟು ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡಲು ಅವಕಾಶವಿರುತ್ತದೆ. ಕೇಂದ್ರ ಕಛೇರಿಗೆ ಮಂಜೂರಾಗಿರುವ ಹುದ್ದೆಗಳ ಪೈಕಿ ಸ್ಥಳೀಯ ವೃಂದಕ್ಕೆ ಮೀಸಲಾಗಿರುವ ಒಂದು ಹುದ್ದೆ ಸೇರಿದಂತೆ ಒಟ್ಟು 07 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸ್ಥಳೀಯ ವೃಂದಕ್ಕೆ ನಿಗಧಿಪಡಿಸಲಾಗಿದೆ.

**9. ದ್ವಿತೀಯ ದರ್ಜೆ ಸಹಾಯಕರು (ವೇತನ ಶ್ರೇಣಿ:21400-42000):** ಈ ವೃಂದದಲ್ಲಿ ಒಟ್ಟು 258 ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 49 ಹುದ್ದೆಗಳು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಮಂಜೂರಾಗಿವೆ. ಸದರಿ ಹುದ್ದೆಯು ಗ್ರೂಪ್ - ಸಿ ವೃಂದದ ಹುದ್ದೆಯಾಗಿದ್ದು ಸ್ಥಳೀಯ ಪ್ರದೇಶಕ್ಕೆ ಮಂಜೂರಾಗಿರುವ ಒಟ್ಟು ಹುದ್ದೆಗಳ ಶೇ. 80 ರಷ್ಟನ್ನು ಸ್ಥಳೀಯ ವೃಂದಕ್ಕೆ ಮೀಸಲಿರಿಸಬೇಕಾಗುತ್ತದೆ. ಅದರಂತೆ 40 ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ನಿಗಧಿಪಡಿಸಲಾಗಿದೆ. ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಶೇ.100ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ

ಭರ್ತಿ ಮಾಡಲು ಅವಕಾಶವಿರುತ್ತದೆ. ಕೇಂದ್ರ ಕಛೇರಿಗೆ ಮಂಜೂರಾಗಿರುವ ಹುದ್ದೆಗಳ ಪೈಕಿ ಸ್ಥಳೀಯ ವೃಂದಕ್ಕೆ ಮೀಸಲಾಗಿರುವ ಒಂದು ಹುದ್ದೆ ಸೇರಿದಂತೆ ಸ್ಥಳೀಯ ವೃಂದಕ್ಕೆ ನಿಗಧಿಯಾಗಿರುವ 41 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ನಿಗಧಿಪಡಿಸಲಾಗಿದೆ.

**10. ದ್ವಿತೀಯ ದರ್ಜೆ ಲೆಕ್ಕ ಸಹಾಯಕರು (ವೇತನ ಶ್ರೇಣಿ:21400-42000):** ಈ ವೃಂದದಲ್ಲಿ ಒಟ್ಟು 62 ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 12 ಹುದ್ದೆಗಳು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಮಂಜೂರಾಗಿವೆ. ಸದರಿ ಹುದ್ದೆಯು ಗ್ರೂಪ್ - ಸಿ ವೃಂದದ ಹುದ್ದೆಯಾಗಿದ್ದು ಸ್ಥಳೀಯ ಪ್ರದೇಶಕ್ಕೆ ಮಂಜೂರಾಗಿರುವ ಒಟ್ಟು ಹುದ್ದೆಗಳ ಶೇ. 80 ರಷ್ಟನ್ನು ಸ್ಥಳೀಯ ವೃಂದಕ್ಕೆ ಮೀಸಲಿರಿಸಬೇಕಾಗುತ್ತದೆ. ಅದರಂತೆ 10 ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ನಿಗಧಿಪಡಿಸಲಾಗಿದೆ.

ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಶೇ.50 ರಷ್ಟು ಹುದ್ದೆಗಳನ್ನು ನೇರನೇಮಕಾತಿ ಮೂಲಕ ಹಾಗೂ ಉಳಿದ ಶೇ.50 ರಷ್ಟು ಹುದ್ದೆಗಳನ್ನು ರಾಜ್ಯ ಆಡಿಟ್ ಮತ್ತು ಲೆಕ್ಕಪತ್ರ ಇಲಾಖೆಯ ಸಿಬ್ಬಂದಿಯ ನಿಯೋಜನೆ ಮೂಲಕ ಭರ್ತಿ ಮಾಡಲು ಅವಕಾಶವಿರುತ್ತದೆ. ಕೇಂದ್ರ ಕಛೇರಿಗೆ ಮಂಜೂರಾಗಿರುವ ಹುದ್ದೆಗಳ ಪೈಕಿ ಸ್ಥಳೀಯ ವೃಂದಕ್ಕೆ ಮೀಸಲಾಗಿರುವ ಒಂದು ಹುದ್ದೆ ಸೇರಿದಂತೆ ಒಟ್ಟು 11 ಹುದ್ದೆಗಳಲ್ಲಿ ಶೇ.50ರ ಮೀಸಲಾತಿಯಂತೆ 06 ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಹಾಗೂ ಉಳಿದ 05 ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ಸೇರಿದ ರಾಜ್ಯ ಆಡಿಟ್ ಮತ್ತು ಲೆಕ್ಕ ಪತ್ರ ಇಲಾಖೆಯ ಸಿಬ್ಬಂದಿಗಳ ನಿಯೋಜನೆ ಮೂಲಕ ಭರ್ತಿ ಮಾಡಲು ನಿಗಧಿಪಡಿಸಲಾಗಿದೆ.

**11. ಬೆರಳಚ್ಚುಗಾರರು (ವೇತನ ಶ್ರೇಣಿ:21400-42000):** ಈ ವೃಂದದಲ್ಲಿ ಒಟ್ಟು 254 ಹುದ್ದೆಗಳು ಮಂಜೂರಾಗಿರುತ್ತವೆ. ಅದರಲ್ಲಿ 48 ಹುದ್ದೆಗಳು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಮಂಜೂರಾಗಿವೆ. ಸದರಿ ಹುದ್ದೆಯು ಗ್ರೂಪ್ - ಸಿ ವೃಂದದ ಹುದ್ದೆಯಾಗಿದ್ದು ಸ್ಥಳೀಯ ಪ್ರದೇಶಕ್ಕೆ ಮಂಜೂರಾಗಿರುವ ಒಟ್ಟು ಹುದ್ದೆಗಳ ಶೇ. 80 ರಷ್ಟನ್ನು ಸ್ಥಳೀಯ ವೃಂದಕ್ಕೆ ಮೀಸಲಿರಿಸಬೇಕಾಗುತ್ತದೆ. ಅದರಂತೆ 39 ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ನಿಗಧಿಪಡಿಸಲಾಗಿದೆ. ಕೇಂದ್ರ ಕಛೇರಿಗೆ ಮಂಜೂರಾಗಿರುವ ಹುದ್ದೆಗಳ ಪೈಕಿ ಸ್ಥಳೀಯ ವೃಂದಕ್ಕೆ ಮೀಸಲಾಗಿರುವ ಒಂದು ಹುದ್ದೆ ಸೇರಿದಂತೆ ಒಟ್ಟು 40 ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಶೇ.100ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ಈ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಮೀಸಲಿರಿಸಲಾಗಿದೆ.

**12. ವಾಹನ ಚಾಲಕರು (ವೇತನ ಶ್ರೇಣಿ:21400-42000):** ಈ ವೃಂದದಲ್ಲಿ ಒಟ್ಟು 216 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 41 ಹುದ್ದೆಗಳು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಮಂಜೂರಾಗಿವೆ. ಸದರಿ ಹುದ್ದೆಯು ಗ್ರೂಪ್ - ಸಿ ವೃಂದದ ಹುದ್ದೆಯಾಗಿದ್ದು ಸ್ಥಳೀಯ ಪ್ರದೇಶಕ್ಕೆ ಮಂಜೂರಾಗಿರುವ ಒಟ್ಟು ಹುದ್ದೆಗಳ ಶೇ. 80 ರಷ್ಟನ್ನು ಸ್ಥಳೀಯ ವೃಂದಕ್ಕೆ ಮೀಸಲಿರಿಸಬೇಕಾಗುತ್ತದೆ. ಅದರಂತೆ 33 ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ಮೀಸಲಿರಿಸಲಾಗಿದೆ. ಕೇಂದ್ರ ಕಛೇರಿಗೆ ಮಂಜೂರಾಗಿರುವ ಹುದ್ದೆಗಳ ಪೈಕಿ ಸ್ಥಳೀಯ ವೃಂದಕ್ಕೆ ಮೀಸಲಾಗಿರುವ ಒಂದು ಹುದ್ದೆ ಸೇರಿದಂತೆ ಒಟ್ಟು 34 ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಶೇ.90ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಮತ್ತು ಶೇ.10ರಷ್ಟು ಹುದ್ದೆಗಳನ್ನು ಗ್ರೂಪ್-ಡಿ ನೌಕರರುಗಳ ಮುಂಬಡ್ತಿ ಮೂಲಕ ಭರ್ತಿ ಮಾಡಲು ಅವಕಾಶವಿದ್ದು, ಅದರಂತೆ 31 ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಹಾಗೂ ಉಳಿದ 03 ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ಸೇರಿದ ಗ್ರೂಪ್ - ಡಿ ವೃಂದದ ನೌಕರರಿಗೆ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡಲು ನಿಗಧಿಪಡಿಸಲಾಗಿದೆ.

**ಗ್ರೂಪ್-ಡಿ ವೃಂದ**

**1. ಪ್ಯೂನ್ (ವೇತನ ಶ್ರೇಣಿ:17000-28950):** ಈ ವೃಂದದಲ್ಲಿ ಒಟ್ಟು 466 ಹುದ್ದೆಗಳು ಮಂಜೂರಾಗಿರುತ್ತವೆ. ಅದರಲ್ಲಿ 88 ಹುದ್ದೆಗಳು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಮಂಜೂರಾಗಿವೆ. ಸದರಿ ಹುದ್ದೆಯು ಗ್ರೂಪ್ - ಡಿ ವೃಂದದ ಹುದ್ದೆಯಾಗಿರುವುದರಿಂದ ಸ್ಥಳೀಯ ಪ್ರದೇಶಕ್ಕೆ ಮಂಜೂರಾಗಿರುವ ಒಟ್ಟು ಹುದ್ದೆಗಳ ಶೇ. 85 ರಷ್ಟನ್ನು ಸ್ಥಳೀಯ ವೃಂದಕ್ಕೆ ಮೀಸಲಿರಿಸಬೇಕಾಗುತ್ತದೆ. ಅದರಂತೆ 75 ಹುದ್ದೆಗಳನ್ನು ಸ್ಥಳೀಯ ವೃಂದಕ್ಕೆ ಹಾಗೂ 10 ಹುದ್ದೆಗಳನ್ನು ಮಿಕ್ಕುಳಿಕೆ ವೃಂದಕ್ಕೆ ನಿಗಧಿಪಡಿಸಲಾಗಿದೆ. ಕೇಂದ್ರ ಕಛೇರಿಗೆ ಮಂಜೂರಾಗಿರುವ ಹುದ್ದೆಗಳ ಪೈಕಿ ಸ್ಥಳೀಯ ವೃಂದಕ್ಕೆ ಮೀಸಲಾಗಿರುವ ಒಂದು ಹುದ್ದೆ ಸೇರಿದಂತೆ ಒಟ್ಟು 76 ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಶೇ.100ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅವಕಾಶವಿದ್ದು, ಅದರಂತೆ ಭರ್ತಿ ಮಾಡಲು ಮೀಸಲಿರಿಸಲಾಗಿದೆ.

**ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ರಾಜ್ಯ ಮಟ್ಟದ ಕೇಂದ್ರ ಕಛೇರಿ**

ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಕಛೇರಿಗೆ ಗ್ರೂಪ್ - ಎ ಕಿರಿಯ ಶ್ರೇಣಿ ಹಾಗೂ ಅಧೀನದಲ್ಲಿ ಬರುವ ವೃಂದಗಳಲ್ಲಿ ಒಟ್ಟು 54 ಹುದ್ದೆಗಳು ಮಂಜೂರಾಗಿರುತ್ತವೆ. ಚಾಲ್ತಿಯಲ್ಲಿರುವ ಆದೇಶದಾನುಸಾರ ರಾಜ್ಯ ಮಟ್ಟದ ಕಛೇರಿಗಳಲ್ಲಿ ಶೇ.8ರಷ್ಟು ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ಅಭ್ಯರ್ಥಿಗಳಿಗೆ ಮೀಸಲಿರಿಸಬೇಕಾಗುತ್ತದೆ.

ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅನುಸರಿಸಿ ರಾಜ್ಯ ಮಟ್ಟದ ಕಛೇರಿಗಳಿಗೆ ಮಂಜೂರಾಗಿರುವ ಹುದ್ದೆಗಳ ಪೈಕಿ ಸ್ಥಳೀಯ ವೃಂದಕ್ಕೆ ಲಭ್ಯವಾಗುವ ಹುದ್ದೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

**ಒಟ್ಟಾರೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಮಂಜೂರಾಗಿರುವ ಹುದ್ದೆಗಳ ಪೈಕಿ ಸ್ಥಳೀಯ ವೃಂದಕ್ಕೆ ಲಭ್ಯವಾಗುವ ಹುದ್ದೆಗಳ ಸಂಪೂರ್ಣ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

26.07.2021

**(ಎಲ್. ಕೆ. ಅತೀಕ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಣೆಗಾಗಿ.

**ಪ್ರತಿಯನ್ನು:**

1. ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ.
2. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಹೈ-ಕ ವಿಶೇಷ ಕೋಶ), ವಿಧಾನ ಸೌಧ.
4. ಮಾನ್ಯ ಗ್ರಾ ಅ ಪಂ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ.
5. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ.
6. ಶಾಖಾಧಿಕಾರಿ, ಇ-ಆಡಳಿತ, ಗ್ರಾ ಅ ಪಂ ರಾ ಇಲಾಖೆ - ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಶಾಖಾ ಕಡತ / ಹೆಚ್ಚುವರಿ ಪ್ರತಿ.

# ಅನುಬಂಧ

| ಕ್ರ. ಸಂ. | ವೃಂದ | ಹುದ್ದೆ | ವೇತನ ಶ್ರೇಣಿ (ರೂ.ಗಳಲ್ಲಿ) | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮಂಜೂರಾದ ವೃಂದ ಬಲ | | | | ರಾಜ್ಯ ಮಟ್ಟದ ಕಛೇರಿಯಲ್ಲಿನ ವೃಂದ ಬಲ | ರಾಜ್ಯ ಮಟ್ಟದ ಸ್ಥಳೀಯ ವೃಂದ (8%) | ಹೈ-ಕ ಪ್ರದೇಶ ವ್ಯಾಪ್ತಿಯ ಕಛೇರಿಗಳಲ್ಲಿನ ವೃಂದಬಲ | ಪ್ರಾದೇಶಿಕ ವ್ಯಾಪ್ತಿ ಸ್ಥಳೀಯ ವೃಂದ (75%) (80%) (85%) | ರಾಜ್ಯ ವ್ಯಾಪ್ತಿ ಸ್ಥಳೀಯ ವೃಂದ (10+12) | ರಾಜ್ಯ ವ್ಯಾಪಿ ಸ್ಥಳೀಯ ವೃಂದದಲ್ಲಿ ಗುರುತಿಸಲಾದ ಹುದ್ದೆಗಳು | | | | ಉಳಿದ ಮೂಲ ವೃಂದ (8-17) |
|---|---|---|---|---|---|---|---|---|---|---|---|---|---|---|---|---|---|
| | | | | ನೇರ ನೇಮಕಾತಿ | ಮುಂಬಡ್ತಿ | ನಿಯೋಜನೆ | ಒಟ್ಟು | | | | | | ನೇರ ನೇಮಕಾತಿ | ಮುಂಬಡ್ತಿ | ನಿಯೋಜನೆ | ಒಟ್ಟು | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 |
| 1 | ಗ್ರೂಪ್ -ಎ | ಸಹಾಯಕ ಕಾರ್ಯಪಾಲಕ ಅಭಿಯಂತರರು-I | 52650-97100 | 37 | 110 | - | 147 | 04 | 01 | 25 | 19 | 20 | 05 | 15 | - | 20 | 126 |
| | | ಸಹಾಯಕ ಕಾರ್ಯಪಾಲಕ ಅಭಿಯಂತರರು-II | 52650-97100 | - | 37 | - | 37 | | -- | 08 | 06 | 06 | - | 06 | - | 06 | 31 |
| 2 | ಗ್ರೂಪ್ - ಬಿ | ಸಹಾಯಕ ಇಂಜಿನಿಯರ್ - I | 43100-83900 | 154 | 51 | - | 205 | 06 | 01 | 38 | 29 | 30 | 22 | 08 | - | 30 | 175 |
| | | ಸಹಾಯಕ ಇಂಜಿನಿಯರ್ - II | 43100-83900 | - | 51 | - | 51 | 02 | - | 10 | 08 | 08 | - | 08 | - | 08 | 43 |
| 3 | | ಪತ್ರಾಂಕಿತ ವ್ಯವಸ್ಥಾಪಕ | 40900-78200 | - | 05 | - | 05 | 01 | - | 01 | 00 | 01 | - | 01 | - | 01 | 04 |
| 4 | ಗ್ರೂಪ್ - ಸಿ | ಅಧೀಕ್ಷಕ | 37900-70850 | - | 40 | - | 40 | 04 | 01 | 07 | 06 | 07 | - | 07 | - | 07 | 33 |
| 5 | | ಲೆಕ್ಕಾಧೀಕ್ಷಕ | 37900-70850 | - | 17 | 17 | 34 | 01 | - | 07 | 06 | 06 | - | 03 | 03 | 06 | 28 |
| 6 | | ಸಹಾಯಕ ಸಾಂಖ್ಯಿಕ ಅಧಿಕಾರಿ | 33450-62600 | - | - | 05 | 05 | 01 | - | 01 | 00 | 01 | - | - | 01 | 01 | 04 |

| | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| 7 | | ಕಿರಿಯ ಇಂಜಿನಿಯರ್ | 33450-62600 | 568 | - | - | 568 | - | - | 105 | 84 | 84 | 84 | - | - | 84 | 484 |
| 8 | | ಸಾಂಖ್ಯಿಕ ನಿರೀಕ್ಷಕರು | 27650-52650 | - | - | 05 | 05 | 01 | 00 | 01 | 00 | 00 | - | - | - | - | 05 |
| 9 | | ಪ್ರಥಮ ದರ್ಜೆ ಸಹಾಯಕ | 27650-52650 | 111 | 111 | - | 222 | 06 | 01 | 41 | 33 | 34 | 17 | 17 | - | 34 | 188 |
| 10 | | ಪ್ರಥಮ ದರ್ಜೆ ಲೆಕ್ಕ ಸಹಾಯಕ | 27650-52650 | 10 | 06 | 16 | 32 | 02 | 01 | 06 | 05 | 06 | 02 | 02 | 02 | 06 | 26 |
| 11 | | ಶೀಘ್ರಲಿಪಿಗಾರ | 27650-52650 | 38 | - | - | 38 | 02 | 01 | 07 | 06 | 07 | 07 | - | - | 07 | 31 |
| 12 | | ದ್ವಿತೀಯ ದರ್ಜೆ ಸಹಾಯಕ | 21400-42000 | 258 | - | - | 258 | 06 | 01 | 49 | 40 | 41 | 41 | - | - | 41 | 217 |
| 13 | | ದ್ವಿತೀಯ ದರ್ಜೆ ಲೆಕ್ಕ ಸಹಾಯಕ | 21400-42000 | 31 | - | 31 | 62 | 02 | 01 | 12 | 10 | 11 | 06 | - | 05 | 11 | 51 |
| 14 | | ಬೆರಳಚ್ಚುಗಾರ | 21400-42000 | 254 | - | - | 254 | 06 | 01 | 48 | 39 | 40 | 40 | - | - | 40 | 214 |
| 15 | | ವಾಹನ ಚಾಲಕ | 21400-42000 | 194 | 22 | - | 216 | 04 | 01 | 41 | 33 | 34 | 31 | 03 | - | 34 | 182 |
| 16 | (ಗ್ರೂಪ್ -ಡಿ) | ಪ್ಯೂನ್ | 17000-28950 | 466 | - | - | 466 | 06 | 01 | 88 | 75 | 76 | 76 | - | - | 76 | 390 |

(ಸಿದ್ದೇಶ್ ಪೊತ್ತಲಕೆಟ್ಟಿ)
ಸರ್ಕಾರದ ಜಂಟಿ ಕಾರ್ಯದರ್ಶಿ (ಆಡಳಿತ-1)
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ